# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಸಾರ್ವಜನಿಕ/ಸರ್ಕಾರಿ ನೌಕರರಾದ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕ್ ನಿಡಸಾಲೆ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕೆಂಪರಾಜು ರವರು ಕರ್ತವ್ಯ ಲೋಪ/ದುರ್ವತನೆ ಎಸಗಿರುವ ಬಗ್ಗೆ- ಆದೇಶ.

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-478/2014/ಎಆರ್‌ಎಲ್‌ಓ, ದಿನಾಂಕ: 06-04-2017.

2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ ಬಿಡಿ-478/2014/ಸನಿಕಾಸ-1, ದಿನಾಂಕ: 06-03-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ:07-02-2017 ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು, ಹುಲಿಯೂರು ದುರ್ಗ ಹೋಬಳಿ ಪಿ.ಹೆಚ್ ಹಳ್ಳಿಯ ನಿವಾಸಿಯಾದ ಶ್ರೀ ಲಿಂಗರಾಜು ಬಿನ್ ದೊಡ್ಡಬೋರಯ್ಯ (ಇನ್ನು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ನಿಡಸಾಲೆ ಗ್ರಾಮ ಪಂಚಾಯತ್‌ನ 1) ಅಧ್ಯಕ್ಷರಾದ ಶ್ರೀಮತಿ ಸೌಭಾಗ್ಯಮ್ಮ ಮತ್ತು ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಕೆಂಪರಾಜು ರವರು (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು, ಹುಲಿಯೂರು ದುರ್ಗ ಹೋಬಳಿ ನಿಡಸಾಲೆ ಗ್ರಾಮ ಪಂಚಾಯತ್ ಅಧ್ಯಕ್ಷರ ನೇತೃತ್ವದಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ ಎದುರುದಾರರು ನಕಲಿ ಜಾಬ್ ಕಾರ್ಡ್‌ಗಳನ್ನು ಸೃಷ್ಟಿಸಿ, ಕೆಲವು ಕಾಮಗಾರಿಗಳನ್ನು ನಿರ್ವಹಿಸದೇ ಬಿಲ್ ಪಾವತಿಸಿ, ನಿರ್ವಹಿಸಲಾದ ಕಾಮಗಾರಿಗಳು ಜೆಸಿಬಿ ಯಂತ್ರದ ಮೂಲಕ ರಸ್ತೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ನಿರ್ವಹಿಸಲಾಗಿದೆಯೆಂದು ಹೇಳಿದ್ದಾರೆ.

ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಆದೇಶಿಸಿದ್ದು, ಸದರಿಯವರು ತನಿಖೆ ಕೈಗೊಂಡು ವರದಿ ಸಲ್ಲಿಸಲು ಸಹಾಯಕ ಅಭಿಯಂತರರು-5 (ಇನ್ನು ಮುಂದೆ ತನಿಖಾಧಿಕಾರಿಗಳು" ಎಂದು ಕರೆಯಲ್ಪಡುತ್ತಾರೆ). ರವರಿಗೆ ಆದೇಶಿಸಿದ್ದು, ಸದರಿಯವರು ತಮ್ಮ ವರದಿಯಲ್ಲಿ-

"2013-14 ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿಯಲ್ಲಿ ಕಾಮಗಾರಿಗಳನ್ನು ಮಾಡದೇ ಸುಳ್ಳು ಉದ್ಯೋಗ ಚೀಟಿ ಸೃಷ್ಟಿಸಿ ಮತ್ತು ಜೆಸಿಬಿ ಯಂತ್ರಗಳ ಮೂಲಕ ರಸ್ತೆ ಮತ್ತು ಕೆರೆ ಅಭಿವೃದ್ಧಿಗಳ ಕಳಪೆ ಕಾಮಗಾರಿ ಕೈಗೊಳ್ಳಲಾಗುತ್ತಿದೆಯೆಂಬ ಆಪಾದನೆ ಕುರಿತು ರಸ್ತೆಗಳಿಗೆ ಯಾವುದೇ ಸಿಮೆಂಟ್, ಮರಳು- ಜಲ್ಲಿಯನ್ನು ಬಳಸದೇ ಕೇವಲ ಮಣ್ಣಿನ ರಸ್ತೆಯನ್ನು ನಿರ್ಮಿಸಿರುವವುದು ಸ್ಥಳ ತನಿಖಾ ಸಮಯದಲ್ಲಿ ಕಂಡು ಬಂದಿದೆ. ಎದುರುದಾರರು ಸಲ್ಲಿಸಿರುವ ಕಾಮಗಾರಿಗಳ 3 ಹಂತದ ಛಾಯಾಚಿತ್ರಗಳಿಂದ ಮತ್ತು ಎಲ್ಲಾ ದಾಖಲಾತಿಗಳಿಂದ ಕಾಮಗಾರಿಗಳನ್ನು ಯಾವುದೇ ಯಂತ್ರೋಪಕರಣಗಳನ್ನು ಬಳಸದೇ ನಿರ್ವಹಿಸಿರುವುದು ಕಂಡು ಬರುವ ಹಿನ್ನೆಲೆಯಲ್ಲಿ ದೂರುದಾರರು ಎದುರುದಾರರ ವಿರುದ್ಧ ಮಾಡಲಾದ ಆಪಾಧನೆಗಳು ಸಾಭೀತಾಗಿಲ್ಲವೆಂದು ಹೇಳಿದ್ದಾರೆ".

ತನಿಖಾಧಿಕಾರಿಗಳ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

**ಕಡತ ಮತ್ತು ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೆಂದರೆ:**

1) ತನಿಖಾಧಿಕಾರಿಗಳ ವರದಿಗೆ ಪೂರಕ ದಾಖಲೆಗಳಿಲ್ಲದ್ದರಿಂದ, ವರದಿಯು ದೋಷಪೂರಿತವಾಗಿದೆ; 2) ದೂರಿನ ದಾಖಲೆಗಳನ್ವಯ- 1) ಚಲಸಮುದ್ರ ಗ್ರಾಮದ ಶ್ರೀ ನಿಂಗಯ್ಯ ಉರುಫ್ ಚನ್ನಿಗಯ್ಯರ ಜಮೀನಿನಲ್ಲಿ ಬದು; 2) ಹೊಸಹಳ್ಳಿದೊಡ್ಡಿ ಗ್ರಾಮದ ಶ್ರೀ ಪುಟ್ಟರಾಮಯ್ಯ ಬಿನ್ ಕಂಪನಿಗೌಡರ ಜಮೀನಿನಲ್ಲಿ ತೆಂಗು ನೆಡುವುದು; 3)ಎ.ಕೆ.ದೊಡ್ಡಿ ಗ್ರಾಮದ ಚಂದ್ರಯ್ಯ ಬಿನ್ ಬೋರಯ್ಯರ ಜಮೀನಿನಲ್ಲಿ ತೆಂಗು ಸಸಿ ನೆಡುವುದು; 4) ನಿಡಸಾಲೆ ಗ್ರಾಮದಿಂದ ಸಿದ್ದೇಗೌಡನದೊಡ್ಡಿಗೆ ಹೋಗುವ ರಸ್ತೆ ಕಾಮಗಾರಿ; 5) ನಿಡಸಾಲೆ ಗ್ರಾಮದ ಪಂಚಾಯತ್ ವರದೇಗೌಡನ ದೊಡ್ಡಿ ಗ್ರಾಮದಲ್ಲಿ ಕಟ್ಟೆ ಅಭಿವೃಧ್ಧಿ; 6) ಎ.ಕೆ.ದೊಡ್ಡಿ ಸರ್ವೆ ನಂ.190 ರ ಶಿವಲಿಂಗಯ್ಯನ ಜಮೀನಿನಿಂದ ಶ್ರೀ ಅಪ್ಪಾಜಿ ಜಮೀನಿನವರೆಗೆ ರಸ್ತೆ; 7) ಹೊಸಹಳ್ಳಿ ದೊಡ್ಡಿ ಗ್ರಾಮದ ಶ್ರೀಮತಿ ಸಣ್ಣಮ್ಮ ಕೋಂ ನಂಜುಂಡಯ್ಯರ ಜಮೀನಿನಲ್ಲಿ ತಡೆ ಆಣೆ ಕಾಮಗಾರಿ ನಿರ್ಮಾಣ; 8) ಹೊಸಹಳ್ಳಿ ದೊಡ್ಡಿ ಕಾಲುವೆಯಿಂದ ಅಚ್ಚುಕಟ್ಟು ಪ್ರದೇಶಕ್ಕೆ ಹೋಗುವ ರಸ್ತೆ; 9)ಎ.ಕೆ ದೊಡ್ಡಿ ಶ್ರೀಮತಿ ಜಯಮ್ಮ ಕೋಂ ದೊಡ್ಡನಾಥಯ್ಯರ ಜಮೀನಿನಲ್ಲಿ ಬದು ನಿರ್ಮಾಣ; 10) ಎ.ಕೆ.ದೊಡ್ಡಿ ಶ್ರೀ ನಂಜುಂಡಯ್ಯ ಜಮೀನಿನಿಂದ ಶ್ರೀ ಚಂದ್ರಯ್ಯನ ಜಮೀನಿನವರೆಗೆ ರಸ್ತೆ; 11) ಮಠದ ದೊಟ್ಟಿ ಗ್ರಾಮದಿಂದ ಮುದ್ದಲಿಂಗನದೊಡ್ಡಿ ಗ್ರಾಮದವರೆಗೆ ರಸ್ತೆ ಅಭಿವೃದ್ಧಿ; 12) ನಿಡಸಾಲೆ ಗ್ರಾಮದ ಶ್ರೀ ಲೋಕೇಶ ಬಿನ್ ತಿರುಮಲಯ್ಯರ ಜಮೀನಿನಲ್ಲಿ ಬದು ನಿರ್ಮಾಣ 13) ಮಠದ ದೊಡ್ಡಿ ಗ್ರಾಮದಿಂದ ಮುದ್ದಲಿಂಗನ ಗ್ರಾಮದವರೆಗೆ ರಸ್ತೆ ಅಭಿವೃಧ್ಧಿ ಕಾಮಗಾರಿ; 14) ಚಲಯಸಂದ್ರ ಶ್ರೀ ಜೋಗಪ್ಪನ ಜಮೀನಿನಿಂದ ಶ್ರೀ ನಂಜಪ್ಪ ಜಮೀನಿನವರೆಗೆ ಹೋಗುವ ರಸ್ತೆ ಅಭಿವೃಧ್ಧಿ ಕಾಮಗಾರಿ; 15) ಚಲಮಸಂದ್ರ ಶ್ರೀ ವೆಂಕಟಾಚಲಯ್ಯನ ಜಮೀನಿನಿಂದ ಶ್ರೀ.ಕಾಡಯ್ಯನ ಜಮೀನಿನವರೆಗೆ ರಸ್ತೆ ಅಭಿವೃಧ್ಧಿ ಕಾಮಗಾರಿ 16) ನಿಡಸಾಲೆ ಗ್ರಾಮದ ತಮ್ಮೇಗೌಡ ಕೃಷ್ಣಪ್ಪನ ಮನೆಯಿಂದ ಶ್ರೀ ತಿರಮಲಯ್ಯರ ಜಮೀನಿಗೆ ಹೋಗುವ ರಸ್ತೆ ಅಭಿವೃಧ್ಧಿ ಕಾಮಗಾರಿ; 17)ಬಿಜಿ ದೊಡ್ಡಿ ಉಜ್ಜನಿ ರಸ್ತೆಯಿಂದ ಶ್ರೀ ಕೋಸೇಗೌಡರ ಜಮೀನಿನವರೆಗಿನ ರಸೆ; 18) ನಿಡಸಾಲೆ ಗ್ರಾಮದಲ್ಲಿ ಶ್ರೀ ಗಂಗರಾಜು ಜಮೀನಿನಿಂದ ಶ್ರೀ ತಿಮಯ್ಯ ರವರ ಜಮೀನಿನವರೆಗಿನ ರಸ್ತೆ ಅಭಿವೃಧ್ಧಿ ಕಾಮಗಾರಿ; 19 ಕಬ್ಬಳ್ಳಿಯಿಂದ ಹೊಸದೊಡ್ಡಿಗೆ ಹೋಗುವ ರಸ್ತೆ ಅಭಿವೃಧ್ಧಿ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ದಾಖಲೆಗಳಿವೆ. ಆದರೆ, ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಕಾಮಗಾರಿಗಳ ಛಾಯಾಚಿತ್ರ ಹಾಗೂ ಇತರೆ ದಾಖಲೆಗಳಿಲ್ಲ. ಈ ಮೇಲೆ ಹೇಳಲಾದ, ಕೆಲವು ಕಾಮಗಾರಿಗಳನ್ನು 2013-14 ನೇ ಸಾಲಿನಲ್ಲಿ ಎಂಜಿಎನ್‌ಆರ್‌ಜಿಎ ಯೋಜನೆ ಅಡಿಯಲ್ಲಿ ನಿರ್ವಹಿಸಿದೆ. ಆದರೆ, ಈ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ ಸದರಿ ಕಾಮಗಾರಿಗಳು ನರ್ವಹಣೆಯಾಗಿರುವ ಬಗ್ಗೆ ಯಾವುದೇ ಪೋಟೋ ಅಥವಾ ಸಿಡಿ ಇಲ್ಲ. ಎಂಜಿಎನ್‌ಆರ್‌ಜಿಎ ಮಾರ್ಗಸೂಚಿಗಳನ್ವಯ ಸದರಿ ಕಾಮಗಾರಿಗಳನ್ನು ಮಾರ್ಮಿಕರಿಂದ ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಕಾಮಗಾರಿಗಳನ್ನು ನಿರ್ವಹಿಸಿ ಕೂಲಿ ಹಣ ಅವರ ಖಾತೆಗೆ ಜಮಾ ಆದ ಬಗ್ಗೆ ಯಾವುದೇ ದಾಕಲೆಗಳಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಕಾರ್ಮಿಕರು'ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ. ಸದರಿ ಕಾಮಗಾರಿಗಳನ್ನು ನಿರ್ವಹಿಸಿದ ಕಾರ್ಮಿಕರು ಉದ್ಯೋಗ ಕೋರಿ ಎದುರುದಾರರಿಗೆ ಅರ್ಜಿ ಸಲ್ಲಿಸಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉಧೃತ ಭಾಗ ಇಲ್ಲ. ಕೆ.ಎಫ್‌ಸಿ ಪರಿಚ್ಛೇದ 57 ರ ಪ್ರಕಾರ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕೆಂದು ಮಾಹಿತಿ ಇದೆ. ಅದೇ ರೀತಿ, ವೋಚರ್‌ಗಳು ಮತತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕೆಂದು ಮಾಹಿತಿ ಇದೆ. ಅದೇ ರೀತಿ, ಕೆ.ಎಫ್‌ಸಿ ಪರಿಚ್ಛೇದ 17 ರ ಪ್ರಕಾರ ಅಗತ್ಯವಿರುವ ಸರಕು ಸಾಮಾಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55 (49) (ಎ) ರಲ್ಲಿನ 500/- ಗಳ ಮಿತಿಯನ್ನು ರೂ.5,000/0- ಆದೇಶಿಸಲಾಗಿದೆ. ರೂ.5,000/- ಮೀರಿದ ರೂ.1,00,000/- ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಕರೆಯತಕ್ಕದ್ದು, ರೂ.1 ಲಕ್ಷ ಮೀರಿದ ಖರೀದಿಗೆ ಪೆಟಿಪಿಪಿ ನಿಯಮ ಅನ್ವಯವಾಗುವುದೆಂದು ತಿಳಿಸಿದೆ. ಆದರೆ, ಎದುರುದಾರರು ಈ ಎಲ್ಲಾ ಕಾನೂನಿನ ಅಂಶಗಳನ್ನು ಅನುಸರಸದೇ, ಈ ಎಲ್ಲಾ ಕಾಮಗಾರಿಗಳ ನಿಯಮಾನುಸಾರ ಕೊಟೇಷನ್ ಪಡೆದು ಅತ್ಯಂತ ಕಡಿಮೆ ಧರ ನಮೂದಿಸಿರುವ ಗುತ್ತಿಗೆದಾರರಿಗೆ ಹಾಗೂ ಸರಬರಾಜುದಾರರಿಗೆ ಕಛೇರಿ ಆದೇಶ ನೀಡಿ ಚೆಕ್ ಮೂಲಕ ಹಣ ಪಾವತಿಸಿದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಸದರಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಆ ಕಾಮಗಾರಿಯ ಪೋಟೋ ಅಥವಾ ಸಿಡಿ ಇಲ್ಲ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಹಾಗೂ ತನಿಖಾಧಿಕಾರಿಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ/ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

2 ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, 2 ನೇ ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿ 2 ನೇ ಎದುರುದಾರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಹಾಗೂ 2 ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14-ಎ ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

ಆದ್ದರಿಂದ ಶ್ರೀ ಕೆಂಪರಾಜು, ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಿಡಸಾಲೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆಯಾದ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಮದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1)(i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಕೆಂಪರಾಜು, ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಿಡಸಾಲೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/312/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 03-05-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕೆಂಪರಾಜು, ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಿಡಸಾಲೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 191 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
6) ಶ್ರೀ ಕೆಂಪರಾಜು, ಕಾರ್ಯದರ್ಶಿ ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಿಡಸಾಲೆ ಗ್ರಾಮ ಪಂಚಾಯತಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.
7) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.